# TABLE OF CONTENTS


| Sl No | Contents | Pg No |
|---|---|---|
| 1 | Original Affiliation letter in Kannada | 1 - 3 |
| 2 | Translated and Attested Affiliation letter | 4 - 6 |
| 3 | Original document for change of name of the school | 7 - 8 |
| 4 | Translated and attested Change of school name | 9 - 10 |

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಕೆ.ಆರ್. ಸರ್ಕಲ್, ಬೆಂಗಳೂರು-೧**

ಸಂಖ್ಯೆ: ಸಿ7(3) ಪ್ರಾಶಿಲಿ ನೊಂದಣಿ: 03 /2003-2004. ದಿನಾಂಕ: 04-07-2003

ನಮೂನೆ-2

(ನಿಯಮ 3 ಉಪನಿಯಮ 5 (ಬಿ))

ಪ್ರಮಾಣ ಪತ್ರ ಸಂಖ್ಯೆ: 29

ಜ್ಯೋತಿ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಶಿಂಶಾಪುರ, ಮಳವಳ್ಳಿ ತಾಲ್ಲೂಕು ಇದರ ಗವರ್ನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಅಕ್ಟ್ 1995) ಸೆಕ್ಷನ್ 31 ರಂತೆ ಈ ದಿನ ನಾಲ್ಕನೇ ಜುಲೈ ಎರಡು ಸಾವಿರದ ಮೂರರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ

| | | |
|---|---|---|
| ೧. ಕ್ರಮ ಸಂಖ್ಯೆ | : | 29/2003-04 |
| ೨. ಶಾಲೆಯ ಹೆಸರು ಮತ್ತು ವಿಳಾಸ | : | ಹೋಲಿ ಏಂಜಲ್ಸ್ ಪ್ರಾಥಮಿಕ ಶಾಲೆ, ಪಂಡಿತಹಳ್ಳಿ ಮಳವಳ್ಳಿ ತಾಲ್ಲೂಕು |
| ೩. ಅನುಮತಿ ನೀಡಿದ ತರಗತಿ | : | 6 ರಿಂದ 7 |
| ೪. ಪ್ರಾರಂಭಿಸ ಬೇಕಾದ ಶೈಕ್ಷಣಿಕ ವರ್ಷ | : | 2003-2004 |
| ೫. ಅನುಮತಿ ನೀಡಿದ ಮಾಧ್ಯಮ | : | ಆಂಗ್ಲ |
| ೬. ಶುಲ್ಕ ಪಾವತಿ ಮಾಡಿರುವುದು | : | ರೂ. 10,000-00 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 29 ಪುಟ ಸಂಖ್ಯೆ: 72 ವಾಲ್ಯೂಂ ಸಂಖ್ಯೆ: 06 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ:

1) ಈ ನೋಂದಾವಣಿಯ ನಿಯಮ 3(5)(4) ಕ್ಕೆ ಒಳಪಟ್ಟಿರುತ್ತದೆ.
2) ಗವರ್ನಿಂಗ್ ಕೌನ್ಸಿಲ್ ಇವರು ನಿಯಮ 4(4)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3) ಶಾಲಾ ನಿವೇಶನ, ವಿಸ್ತೀರ್ಣ,ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು, ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4) ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5) ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6) ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.

7) ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂದಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ ಸಂಖ್ಯೆ:1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

8) ಈ ಪ್ರಾಥಮಿಕ ಶಾಲಾ ನೋಂದಾವಣೆಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ:175 ಪಿಎಂಪಿ 95, ದಿನಾಂಕ: 7-9-98 ಮತ್ತು ದಿನಾಂಕ: 29-12-98 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. (Permanently without aid) ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 10-00 ರ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

9) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧವಾಗಿರತಕ್ಕದ್ದು.

10) ಇಲಾಖೆ ಹಾಗೂ ಸರ್ಕಾರ ನಿಗಧಿ ಪಡಿಸಿದ ಪಠ್ಯ ಪುಸ್ತಕ, ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೇ ಅಳವಡಿಸತಕ್ಕದ್ದು.

11) ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 39 ರ ರೀತ್ಯಾ ಹಾಗೂ ಇಡಿ 131 ವಿವಿದ 98 ಬೆಂಗಳೂರು ದಿನಾಂಕ: 4-11-99 ರಂತೆ ರೆಕಗ್ನೀಷನ್ ಹಾಗೂ ಪ್ರಾವಿಷನಲ್ ರೆಕಗ್ನೀಷನ್ ಹೊಂದಲು ಸರ್ಕಾರಿ ಪ್ರಕಟಣೆ ಇಡಿ 137 ವಿವಿದ 98 ಬೆಂಗಳೂರು ದಿನಾಂಕ: 19-5-99ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ರೆಕಗ್ನೀಷನ್‌ಗೆ ಅರ್ಜಿ ಸಲ್ಲಿಸ ತಕ್ಕದ್ದು.

12) ಸರ್ಕಾರಿ ಆದೇಶ ಸಂಖ್ಯೆ ಇಡಿ28 ಪಿಜಿಸಿ 94 ದಿನಾಂಕ: 29-4-94 ರಂತೆ 1ರಿಂದ 5ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸುತ್ತಿರುವ ಶಾಲೆಗಳಿಗೆ 6ನೇ ತರಗತಿಯಿಂದ ಆಂಗ್ಲ ಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿ ನೋಂದಾಯಿಸಲಾಗಿದೆ. ಭಾಷಾ ನೀತಿಗೆ ಒಳಪಟ್ಟು ನೊಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ/ಇಲಾಖೆಯ/ಕನ್ನಡ ಅಬಿವೃದ್ದಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ಅನುಮತಿ ಮತ್ತು ನೋಂದಣಿಯನ್ನು ರದ್ದುಪಡಿಸಲಾಗುವುದು. ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ಮೇಲ್ದರ್ಜೆಗೇರಿಸಿ ಅನುಮತಿ ಹಾಗೂ ನೋಂದಣಿ ಪಡೆದಿರುವ ಶಾಲೆಗಳಿಗೆ ಭಾಷಾ ನೀತಿಯ ಷರತ್ತು ಅನ್ವಯಿಸುವುದಿಲ್ಲ. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೊಂದಣಿಯನ್ನು ರದ್ದುಪಡಿಸಲಾಗುವುದು.

13) ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

14) ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

15) ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

16) ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

17) ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

18) ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

19) ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

20) 2003-04ನೇ ಸಾಲಿಗೆ 6ನೇ ತರಗತಿ ಪ್ರಾರಂಭಿಸಲು (ಆಂಗ್ಲ ಮಾಧ್ಯಮ) ನೊಂದಾಯಿಸಿರುವುದರಿಂದ 7ನೇ ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಆಧಾರದ ಮೇಲೆ ಪ್ರಾರಂಭಿಸತಕ್ಕದ್ದು.

21) ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ 1 ರಿಂದ 7ನೇ ತರಗತಿಗಳಿಗೆ ಯಾವುದೇ ರೀತಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು.

22) ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಪಿಜಿಸಿ 2002 ದಿನಾಂಕ:11-06-2002ರ ಪ್ರಕಾರ 6ನೇ ತರಗತಿ ಆಂಗ್ಲ ಮಾಧ್ಯಮಕ್ಕೆ ಅನುಮತಿ ನೀಡಲಾಗಿದೆ.

23) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 27 ಎಸ್‌ಇಪಿ 2003/ದಿನಾಂಕ: 13-02-2003 ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಪಾಲಿಸದೇ ಇದ್ದಲ್ಲಿ ನಿಮ್ಮ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

ಸ್ಥಳ: ಬೆಂಗಳೂರು
ದಿನಾಂಕ: 04-07-2003

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ನೋಂದಣಿ ಅಧಿಕಾರಿ

ಗೆ:

೧. ಕಾರ್ಯದರ್ಶಿಗಳು, ಜ್ಯೋತಿ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಶಿಂಶಾಪುರ, ಮಳವಳ್ಳಿ ತಾಲ್ಲೂಕು
೨. ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ
೩. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಳವಳ್ಳಿ ತಾಲ್ಲೂಕು, ಮಳವಳ್ಳಿ
೪. ಜ್ಞಾಪನ ಕಡತ.
೫. ಕಛೇರಿ ಪ್ರತಿ.

ghs\\Type-2\gia-pry\5658 _04.doc

# OFFICE OF THE COMMISSIONER, PUBLIC EDUCATION DEPARTMENT, GOVERNMENT OF KARNATAKA, NEW PUBLIC BUILDINGS, NRIPATHUNGA ROAD, KR. Circle, Bangalore-1

no: c7 (3) 2 d: 03 / 2003-2004. Date: 04-07-2003

Form-2

(Rule 3 sub-rule 5 (b))

Certificate No: 29

The Governing Council of Jyothi Rural Development Society, Shimshapur, Malavalli Taluk is hereby certified to be registered as under section 31 of the Karnataka Education Act, 1983 (Karnataka Act 1995) this fourth day of July two thousand and three to run the undermentioned educational institution.

| | |
|---|---|
| 1. Order No. | : 29/2003-04 |
| 2. School Name and Address | : Holy Angels Primary School, Panditahalli, Malavalli Taluk |
| 3. Class Allowed | : 6 to 7 |
| 4. Academic Year to be started | : 2003-2004 |
| 5. Medium Permitted | : English |
| 6. Fee paid | : Rs 10,000-00 |

The said educational institution is registered in the Register of Educational Institutions in this office at Order No: 29 Page No: 72 Volume No: 06.

This certificate is issued subject to the following conditions:

1) Subject to rule 3(5)(4) of this Registration.

2) The Governing Council shall compulsorily comply with all the conditions mentioned in Rule 4(4).

3) School site, area, building, teaching, furniture, staff class financial facilities,

etc. subject to the condition of providing.

4) Under no circumstances shall the said educational institution open more departments without the prior approval of the Government.

5) The school shall be opened only in the sanctioned medium and at the same place and shall not be allowed to change the place for any reason.

6) The Board to which permission has been given to run the school shall be run at the same place and in the same name and shall not be transferred for any reason without the prior permission of the Government.

Attested

Head Master

Govt. ... High School ... Town, Mandya Dt. 571...

7) This educational institution shall comply with all Government orders and rules in force and issued from time to time relating to educational institutions. The Karnataka Education Bill 1983 (Karnataka Act No:1:95) Acts under it and rules framed therein shall be strictly followed.

8) This Primary School Registry as per Government Notification No. ED:175 PMC 95, Dated: 7-9-98 and Dated: 29-12-98 is permanently unaided. (Permanently without aid) The Board of Management does not want any grant from the Government Rs. Issuance of consent deed certified before a notary on 10-00 stamp paper.

9) Rules of Karnataka Private Educational Institutions (Discipline and Control) Rules, 1999 shall be observed and adhered to.

10) The text book, examination procedure etc. prescribed by the department and government should be adopted without fail.

11) Within 2 months of permission to have recognition and provisional admission under Sections 36 to 39 of the Karnataka Education Act, 1983 (Act 1 of 1995) and ED 131 Vida 98 Bangalore dated 4-11-99 to have recognition and provisional admission. : 19-5-99 should apply for recognition to the competent authorities.

12) Government Order No. ED28 PGC 94 dated: 29-4-94 upgradation from 6th standard to English medium for schools conducting 1st to 5th standard in Kannada or children's mother tongue medium and following language policy. Violation of the language policy in schools registered under the language policy is brought to the notice of the Government/Department/Kannada Development Authority, the permission and registration of the said school will be cancelled as per rules. The language policy clause does not apply to schools which have been upgraded and registered in Kannada or the mother tongue medium of the children. If the documents submitted along with the registration proposal are found to be untrue in any case, the registration will be cancelled.

13) For starting the school, the institution shall keep the security deposit in the joint account of the District Deputy Director and the Secretary of the Governing Body.

14) The ratio of children to teachers in each permitted class as per rules
To be obeyed.

15) Only trained and qualified teachers as per department rules should be appointed.

16) Medical examination of students should be done as per rules every year.

17) According to the rules of Karnataka Education Bill, facilities like furniture, teaching equipment, library books, playground school building etc. should be provided in one year, otherwise the registration will be cancelled.

18) School working hours and days shall be followed as per department rules.

Attested

Head Master

19) School opening and enrollment of students should be reported to this office within two months of school registration or commencement of academic year. If the school is not opened and any conditions are not complied with, this order will automatically stand cancelled.

20) For the year 2003-04, 7th standard is registered to start 6th standard (English medium).It should be started on a natural growth basis.

21) To ensure that classes 1 to 7 of Kannada medium are not affected in any way by sanctioning English medium senior primary school.

22) As per Govt Order No: ED 44 PGC 2002 Dated: 11-06-2002 Class 6 English Medium has been permitted.

23) Instructions vide Government Circular No: ED 27 SEP 2003/dated: 13-02-2003 shall be compulsorily followed. Failure to comply will result in cancellation of your school's accreditation.

Location: Bangalore
Date: 04-07-2003

**Director (Elementary Education)**
**Public Education Department and**
**Registrar**

1. Secretaries, Jyothi Rural Development Society, Shimshapur, Malavalli Taluk
2. District Deputy Director, Department of Public Education, Mandya District, Mandya
3. Field Education Officer, Department of Public Education, Malavalli Taluk, Malavalli
4. Memo file.
5. Office copy.

Attested

Head Master

ghs\\Type-2/gia-pry/5658_04.doc

# ಉಪನಿರ್ದೇಶಕರ ಕಛೇರಿ , ಶಾಲಾ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.

ಸಂ:ಜಿ3(ಅ2)3487 ಶಾ.ಹೆ.ಬ 65/2023-24 ದಿನಾಂಕ: 11-1-2024

**ಜ್ಞಾಪನ**

**ವಿಷಯ**:ಹೋಲಿ ಏಂಜೆಲ್ಸ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು ಈ ಶಾಲೆಯ ಹೆಸರು ಬದಲಾವಣೆ ಮಾಡಲು ಕೋರಿರುವ ಬಗ್ಗೆ.

**ಉಲ್ಲೇಖ**: 1.ಕ್ಷೇತ್ರ ಶಿಕ್ಷಣಾಧಿಕಾರಿಗಳು,ಮಳವಳ್ಳಿ ರವರ ಪ.ಸಂ:ಸಿ4:ಖಾ.ಅ.ರ.ಶಾ./ಹೋ.ಏ.ಶಾ.ಹೆ.ಬ.ಅನು 34/2023-24 ದಿನಾಂಕ: 25-11-2023.

2. ಮಾನ್ಯ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಜ್ಞಾಪನ ಸಂಖ್ಯೆ: E-1035161-DPI-CPIC7-2(USM)3/2023 GRANT IN AID SEC DATE 16-3-2023.

* * *

**ಪ್ರಸ್ತಾವನೆ:**

ಕರ್ನಾಟಕ ಜಸ್ವಿಟ್ ಸೊಸೈಟಿ (ರಿ), ಬೆಂಗಳೂರು ಈ ಆಡಳಿತ ಮಂಡಳಿಯಿಂದ ನಡೆಯುತ್ತಿರುವ ಹೋಲಿ ಏಂಜೆಲ್ಸ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು ಈ ಶಾಲೆಯ ಹೆಸರನ್ನು ಸೆಂಟ್ ಜೋಸೆಫ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ಎಂದು ಬದಲಾವಣೆ ಮಾಡಲು ಕೋರಿ ಉಲ್ಲೇಖ-1 ರಲ್ಲಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ಶಿಫಾರಸ್ಸು ಪರಿಗಣಿಸಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ:**

ಹೋಲಿ ಏಂಜೆಲ್ಸ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಶಾಲೆಯ ಹೆಸರನ್ನು ಸೆಂಟ್ ಜೋಸೆಫ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಎಂದು ಬದಲಾವಣೆ ಮಾಡಲು ಕೆಳಕಂಡ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿದೆ.

| ಸಂಸ್ಥೆಯ ಹೆಸರು ಮತ್ತು ವಿಳಾಸ | ಹಳೆಯ ಶಾಲೆಯ ಹೆಸರು ಮತ್ತು ವಿಳಾಸ | ತಿದ್ದುಪಡಿ ಮಾಡಿದ ಶಾಲೆಯ ಹೆಸರು ಮತ್ತು ವಿಳಾಸ |
|---|---|---|
| ಕರ್ನಾಟಕ ಜಸ್ವಿಟ್ ಸೊಸೈಟಿ (ರಿ), ಲೊಯೊಲಾ ಮಂದಿರ, 96, ಲ್ಯಾವೆಲ್ಲೆ ರೋಡ್, 3ನೇ ಕ್ರಾಸ್, ಬೆಂಗಳೂರು 560001. | ಹೋಲಿ ಏಂಜೆಲ್ಸ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು , ಮಂಡ್ಯ ಜಿಲ್ಲೆ | ಸೆಂಟ್ ಜೋಸೆಫ್ ಸ್ಕೂಲ್, ಪಂಡಿತಹಳ್ಳಿ, ಮಳವಳ್ಳಿ ತಾಲ್ಲೂಕು, , ಮಂಡ್ಯ ಜಿಲ್ಲೆ , |

**ಷರತ್ತುಗಳು:**

1. ಶಾಲೆಯ ಹೆಸರಿನ ಕೆಳಗೆ ಈ ಕೆಳಕಂಡ ವಿವರಗಳನ್ನು ದಪ್ಪ ಅಕ್ಷರಗಳಲ್ಲಿ ಬರೆಯಬೇಕು.
   (1) ಯಾವ ಮಾಧ್ಯಮದಲ್ಲಿ ನಡೆಯುತ್ತಿದೆ.
   (2) ಯಾವ ಪಠ್ಯಕ್ರಮ ಅನುಸರಿಸಲಾಗುತ್ತಿದೆ.
   (3) ಯಾವ ತರಗತಿಯಿಂದ ಯಾವ ತರಗತಿಯವರೆಗೆ.
2. ಈ ಆದೇಶ ಜಾರಿಯಾದ ತಕ್ಷಣವೇ ಶಾಲೆಯ ಹಳೆಯ ಹೆಸರನ್ನು ಅದರ ವಿಳಾಸದೊಂದಿಗೆ ರದ್ದುಪಡಿಸುವುದು.
3. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಯ ಬದಲಾದ ಹೆಸರು ಹಾಗೂ ವಿಳಾಸದ ಬಗ್ಗೆ ಮತ್ತು ಬದಲಾವಣೆ ಹೆಸರಿನ ಶಾಲೆಯ ಆಡಳಿತ ಮಂಡಳಿಯು ಕರ್ನಾಟಕ ಸೊಸೈಟಿ ರಿಜಿಸ್ಟ್ರೇಷನ್ ಶಿಕ್ಷಣ ಕಾಯ್ದೆಯಡಿಯಲ್ಲಿನ ಸಂಖ್ಯೆ, ವಿಳಾಸ ಶಿಕ್ಷಣ ಕಾಯ್ದೆಯಡಿಯಲ್ಲಿನ ರಿಜಿಸ್ಟ್ರೇಷನ್ ಸಂಖ್ಯೆ, ಸದಸ್ಯರುಗಳ ಹೆಸರು ಈ ವಿವರಗಳನ್ನು ಒಳಗೊಂಡ ಆದೇಶವನ್ನು ಹೊರಡಿಸತಕ್ಕದ್ದು.
4. ಆಡಳಿತ ದೃಷ್ಟಿಯಿಂದ ಶಾಲೆಯ ಹೆಸರನ್ನು ಒಂದು ಬಾರಿ ಮಾತ್ರ ಬದಲಾಯಿಸತಕ್ಕದ್ದು. ಮತ್ತೆ ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಅದನ್ನು ಪರಿಗಣಿಸತಕ್ಕದ್ದಲ್ಲ.
5. ಹಳೇ ಶಾಲೆ ಹೆಸರಿನಲ್ಲಿ ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ಶಾಲೆಯನ್ನು ನಡೆಸಬಾರದು.

6. ಕಛೇರಿಯ ವ್ಯವಹಾರಗಳಿಗೆ ಶಾಲಾ ಹೆಸರು ಬದಲಾಯಿಸಿದ ದಿನಾಂಕದಿಂದ ಹೊಸದಾಗಿ ನಾಮಕರಣ ಮಾಡಿರುವ ಹೆಸರು ಚಾಲ್ತಿಯಲ್ಲಿರುತ್ತದೆ.
7. ನೂತನ ಹೆಸರಿನಲ್ಲಿ ಶಾಲೆ ನಡೆಸುತ್ತಿರುವ ಬಗ್ಗೆ, ಬದಲಾವಣೆ ಜಾರಿಗೆ ಬಂದ ತಕ್ಷಣ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರು ಈ ಕಛೇರಿಗೆ ಲಿಖಿತವಾಗಿ ತಿಳಿಸತಕ್ಕದ್ದು.
8. ಹೆಸರು ಬದಲಾವಣೆ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಸಾರ್ವಜನಿಕರ ಗಮನಕ್ಕೆ ತರಲು ಆಡಳಿತ ಮಂಡಳಿಗೆ ಸೂಚಿಸಿ, ಅದೇ ಪ್ರಕಟಣೆಯಲ್ಲಿ ಅದೇ ವಿಳಾಸದಲ್ಲಿ ಹೆಸರು ಬದಲಾವಣೆ ಆಗಿರುವ ಸಾರ್ವಜನಿಕರಿಗೆ ತಿಳಿಯಪಡಿಸುವುದು.
9. ಶಾಲೆಯ ಹೆಸರು ಬದಲಾವಣೆ ಕುರಿತಂತೆ ಯಾವುದಾದರೂ ನ್ಯಾಯಾಲಯ ಪ್ರಕರಣ ಉದ್ಭವವಾದಲ್ಲಿ ಅದಕ್ಕೆ ಆಡಳಿತ ಮಂಡಳಿಯವರು ಜವಾಬ್ದಾರರಾಗುತ್ತಾರೆ.
10. ಕರ್ನಾಟಕ ಶಿಕ್ಷಣ ಕಾಯ್ದೆಯ ಇತರೆ ಎಲ್ಲಾ ನಿಯಮ/ಸಾಮಾನ್ಯ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ ಮಂಡ್ಯ.

ಗೆ,

1. ಕ್ಷೇತ್ರ ಶಿಕ್ಷಣಾಧಿಕಾರಿಗಳು , ಮಳವಳ್ಳಿ ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
1. ಕಾರ್ಯದರ್ಶಿಗಳು, ಕರ್ನಾಟಕ ಜಸ್ವಿಟ್ ಸೊಸೈಟಿ (ರಿ), ಲೊಯೊಲಾ ಮಂದಿರ, 96, ಲ್ಯಾವೆಲ್ಲೆ ರೋಡ್, 3ನೇ ಕ್ರಾಸ್, ಬೆಂಗಳೂರು 560001.
2. ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಮಂಡ್ಯ ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

**Office of the Deputy Director, School Education Department, Mandya District, Mandya.**

No:G3(A2)3487 S.H.B 65/2023-24 Date: 11-01-2024

**Reminder**

**Subject**: Holy Angels School, Panditahalli, Malavalli Taluk Regarding the request to change the name of this school.

**Reference:** 1. Field Education Officers, Malavalli, d.do:C4:K.A.R.S./H.A.S.H.B.34/2023-24 Date: 25-11-2023.

2. From Hon'ble Commissioner, Department of Public Education, Bangalore No: E-1035161-DPI-CPIC7-2(USM)3/2023 GRANT IN AID SEC DATE 16-3-2023.

**Proposal:**

KARNATAKA JUST SOCIETY (R), BANGALORE Considering the recommendation in the proposal submitted in reference-1 seeking to change the name of Holy Angels School, Panditahalli, Malavalli, Taluk to St. Joseph School, Panditahalli, Malavalli Taluk, Mandya District by this Governing Body, it is ordered as follows.

**Order:**

Holy Angels School, Panditahalli, Malavalli Taluk, Mandya District has given permission to change the name of this school to St. Joseph School, Panditahalli, Malavalli Taluk, Mandya District subject to the following conditions.

| Name and address of the institution | Old School Name and Address | Amended school name and address |
|---|---|---|
| Karnataka Jesuit Educational Society (R), Loyola Mandir, 96, Lavelle Road, 3rd Cross, Benagluru-560001 | Holy Angels School, Panditahalli, Malavalli Taluk, Mandya District | St. Joseph School, Panditahalli, Malavalli Taluk, Mandya District, |

**Conditions:**

Old school name and address

1. Below the school's name the following details should be written in bold letters.
   (1) In what medium is it taking place.
   (2) What curriculum is being followed.
   (3) From which class to which class.
2. Cancellation of the old name of the school along with its address immediately after the execution of this order.
3. The Field Education Officer shall issue an order regarding the changed name and address of the school and the Board of Management of the school for the change of name shall issue an order containing the details of Karnataka Society Registration Number under the Education Act, Address, Registration Number under the Education Act, Name of the members.
4. Name of the school should be changed only once for administrative purposes. If a proposal for change is submitted again, it will not be considered.
5. The management should not run the school under the name of the old school for any reason.

Attested

Head Master

6. The newly renamed name shall prevail from the date of change of school name for office affairs.
7. The District Education Officers should inform this office in writing about the running of the school under the new name as soon as the change takes effect.
8. Instruct the Board of Management to bring the change of name to the notice of the public in the local newspapers and inform the public of the change of name in the same publication at the same address.
9. Any court case regarding change of school name
If it arises, the management will be held responsible for it. 10. All other rules/general conditions of the Karnataka Education Act must be followed.

Deputy Director,
School Education Department Mandya.

To,
1. Field Education Officers, Malavalli for further necessary action.
1. The Secretaries, Karnataka Jesuit Society (Re), Loyola Mandir, 96, Lavelle Road, 3rd Cross, Bangalore 560001.
2. Sub-Project Coordinators, Integrated Education Karnataka, Mandya for necessary action.
3. Office copy.

Attested

Head Master
Girls Government High School (Old)
Malavalli Town, Mandya Dt.-571430